

# ನಟನೆಯ ಬೆನ್ನತ್ತಿ

■ ಸುಷ್ಮಾ ಸವಸುದ್ದಿ

ಭಾನುವಾರದ ರಜೆಯಲ್ಲಿ ಟೈಂ ಪಾಸ್‌ಗೆಂದು ಶುರು ಮಾಡಿದ ವಿಡಿಯೊಗಳು... ಬಾಲ್ಯದಲ್ಲಿ ಚಪ್ಪಾಳೆ ತಟ್ಟಿಸಿಕೊಂಡ ನಾಟಕದ ಅಭಿನಯ... ಅಮ್ಮ ಬೇಡ ಎಂದು ಗೋಗರೆದರೂ ರಕ್ತದಲ್ಲಿ ಅಚ್ಚೊತ್ತಿದ್ದ ಅಪ್ಪ ನಟಿಸುತ್ತಿದ್ದ ಖಳನಾಯಕನ ಪಾತ್ರಗಳು... ಸಾಮಾಜಿಕ ಜಾಲತಾಣ ಒದಗಿಸಿದ ವೇದಿಕೆಯಲ್ಲಿ ತಮ್ಮೊಳಗಿನ ಕಲಾವಿದನನ್ನು ಪರಿಚಯಿಸಿತು. ಮತ್ತಿಂದು ಅದೇ ಸಾಮಾಜಿಕ ಜಾಲತಾಣ ನಾಡಿನ ಜನರ ಪ್ರೀತಿ, ಮೆಚ್ಚುಗೆ ಜೊತೆಗೆ ಹೊಸ ಅವಕಾಶಗಳನ್ನೂ ತೆರೆದಿಡುತ್ತಿದೆ...

ಹೀಗೆ ತಮ್ಮ ಬದುಕಿನ ಅದೃಷ್ಟದ ಬಾಗಿಲನ್ನು ತೆರೆದ ಸಾಮಾಜಿಕ ಜಾಲತಾಣಗಳು, ಮನ್ನಣೆ ನೀಡಿದ ಪ್ರೇಕ್ಷಕ ಬಳಗಕ್ಕೂ ವಂದಿಸುತ್ತ ಮಾತು ಶುರು ಮಾಡಿದ್ದು 'ಮಲ್ಯಾ ಬಾಗಲಕೋಟ' ಹೆಸರಿನಿಂದಲೇ ಖ್ಯಾತಿ ಗಳಿಸಿದ ಕಲಾವಿದ ಮಲ್ಲಯ್ಯ ಹಿರೇಮಠ. ತಮ್ಮ ಉತ್ತರ ಕರ್ನಾಟಕ ಭಾಷೆಯ ಸೊಗಡು, ಅಲ್ಲಿನ ಜನ ಜೀವನ, ಯುವಕರ ಸ್ಥಿತಿ, ಹಾಸ್ಯ, ಪ್ರೀತಿ, ಸಂಸಾರ ಕಥೆಗಳ ಮೂಲಕ ಮನೆಮಾತಾದವರು ಇವರು.

ಬಾಗಲಕೋಟೆಯ ಸಾಳಗುಂದಿ ಗ್ರಾಮದ ಮಲ್ಲಯ್ಯ ಬಿ.ಎ ಪದವಿ ಮುಗಿಸಿ, ಸಕ್ಕರೆ ಕಾರ್ಖಾನೆಯೊಂದರಲ್ಲಿ ಮಾರ್ಕೆಟಿಂಗ್ ಎಕ್ಸಿಕ್ಯುಟಿವ್ ಆಗಿ ಕೆಲಸ ಮಾಡುತ್ತಿದ್ದರು. ರಜೆಯ ದಿನಗಳಲ್ಲಿ, ಬಿಡುವಿನ ಸಮಯದಲ್ಲಿ ಗೆಳೆಯರ ಜೊತೆ ಸೇರಿ ಟಿಕ್‌ಟಾಕ್ ಮಾಡಲು ಆರಂಭಿಸಿದ್ದರು. ಕೆಲ ವಿಡಿಯೊಗಳು ವೈರಲ್ ಆಗಿ, ಜನರ ಮೆಚ್ಚುಗೆ ಪಡೆಯುತ್ತಿದ್ದಂತೆ ಇದರಲ್ಲೂ ಭವಿಷ್ಯ ಇದೆ ಎಂದು ಭಾವಿಸಿ ಮುಂದುವರಿದರು. ಜನ ತಮ್ಮ ನಟನೆ ಮತ್ತು ಕಂಟೆಂಟ್ ಅನ್ನು ಸ್ವೀಕರಿಸುತ್ತಿದ್ದಾರೆ ಎಂಬ ಆತ್ಮವಿಶ್ವಾಸ ಮೂಡುತ್ತಿದ್ದಂತೆ ತಮ್ಮ ವೃತ್ತಿ ಬಿಟ್ಟು, ಸಾಮಾಜಿಕ ಜಾಲತಾಣಗಳ ಮೂಲಕ ಜನರನ್ನು ರಂಜಿಸುವ ಕೆಲಸಕ್ಕೆ ಪೂರ್ಣ ಸಮಯ ನೀಡಿ, ನಟನೆಯ ಬೆನ್ನು ಹತ್ತಿದರು.

ಈವರೆಗೂ ನೂರೈವತ್ತಕ್ಕೂ ಹೆಚ್ಚು ಕಿರುಚಿತ್ರಗಳನ್ನು ಮಾಡಿದ್ದಾರೆ. ನಾಲ್ಕು ಸಿನಿಮಾಗಳಲ್ಲಿ ನಟಿಸಿದ್ದಾರೆ. ಶಿವರಾಜಕುಮಾರ್, ಉಪೇಂದ್ರ, ರಾಜ್ ಬಿ. ಶೆಟ್ಟಿ ನಟನೆಯ, ಅರ್ಜುನ್ ಜನ್ಯ ನಿರ್ದೇಶನದ '45' ಸೇರಿದಂತೆ 'ಹುಲಿಬೀರ', 'ಹೌದೋ ಹುಲಿಯಾ', 'ಲಡ್ಡು' ಸಿನಿಮಾಗಳಲ್ಲಿ ನಟಿಸಿದ್ದಾರೆ. ಈಗ ತಾವೇ ಒಂದು ಸಿನಿಮಾ ಮಾಡಲು ಸಿದ್ಧರಾಗುತ್ತಿದ್ದಾರೆ. ಸ್ಕ್ರಿಪ್ಟ್ ಕೆಲಸ ಮುಗಿಸಿದ್ದು, ರಮೇಶ ಅರವಿಂದ, ಶ್ರುತಿ ಅವರ ನಟನೆಯಲ್ಲಿ ಸಿನಿಮಾ ತಯಾರಿಸುವ ಯೋಜನೆಯಲ್ಲಿದ್ದಾರೆ. 'ಕಥೆ ಈಗಾಗಲೇ ರಮೇಶ ಅರವಿಂದ ಅವರ ಮೆಚ್ಚುಗೆಗೂ ಪಾತ್ರವಾಗಿದ್ದು, ನಿರ್ಮಾಪಕರ ಹುಡುಕಾಟದಲ್ಲಿದ್ದೇವೆ' ಎನ್ನುತ್ತಾರೆ ಮಲ್ಲಯ್ಯ. ಉತ್ತರ ಕರ್ನಾಟಕದ ಛಾಪು ಈ ಸಿನಿಮಾದ ಉಸಿರಾಗಿರಲಿ ಎನ್ನುವುದು ಜನರ ಅಪೇಕ್ಷೆ. 'ನಮ್ಮ ಸಂಸ್ಕೃತಿ, ಪರಂಪರೆಯನ್ನು ತೋರಿಸುವ ಬರದಲ್ಲಿ ಕಥೆಗೆ ಅಗತ್ಯವಲ್ಲದ್ದನ್ನು ಒತ್ತಾಯವಾಗಿ ತುರುಕಬಾರದು' ಎನ್ನುವುದು ಮಲ್ಯಾ ಅವರ ಕಾಳಜಿ.



ತಮ್ಮ ಸಿನಿಮಾ, ಶಾರ್ಟ್ ಫಿಲ್ಮ್, ರೀಲ್ಸ್‌ಗಳಿಗೆಲ್ಲ ಮಲ್ಯಾ ಅವರೇ ಸ್ಕ್ರಿಪ್ಟ್ ರೈಟರ್, ನಿರ್ದೇಶಕ ಎಲ್ಲವೂ. ಪುಸ್ತಕ ಓದುವ ಅವರ ಹವ್ಯಾಸ, ಸಾಹಿತ್ಯದ ಬಗೆಗೆ ಅವರಿಗಿರುವ ಅಭಿಮಾನ ಮತ್ತು ಆಸಕ್ತಿ ಅವರನ್ನು ಒಬ್ಬ ಬರಹಗಾರನಾಗಿಯೂ ರೂಪಿಸಿದೆ. ಅವರ ಸಹೋದರ ದಿನೇಶ ಹಿರೇಮಠ ಇವರ ವಿಡಿಯೊ ಎಡಿಟರ್. ಸುನೀಲ ಮರಡಿ, ಕಿರಣ್ ಮಾದಾರ, ಸುಭಾಷ್ ಬಾಗಲಕೋಟೆ, ಪ್ರಿಯಾ ಸವದಿ ಇವರ ಕೆಲಸಕ್ಕೆ ಜೊತೆಯಾಗಿದ್ದಾರೆ. ತಮ್ಮ ಸುತ್ತಮುತ್ತಲ ಊರಿನ ಯುವಕರನ್ನು ಕೂಡಿಕೊಂಡು, ಅವರಿಗೆ ನಟನೆ ಕಲಿಸುತ್ತಾ ಶೂಟಿಂಗ್ ಮಾಡುತ್ತಾರೆ. ತಮ್ಮ ಯಶಸ್ಸಿಗೆ ಟೀಂ ವರ್ಕ್ ತುಂಬಾ ಮುಖ್ಯ ಎನ್ನುವ ಮಲ್ಯಾ ಅವರು, ತಮ್ಮೊಂದಿಗೆ ಕೆಲಸ ಮಾಡುವವರ ಅನುಕೂಲಕ್ಕೆಂದು ಶನಿವಾರ, ಭಾನುವಾರವನ್ನು ಶೂಟಿಂಗ್‌ಗೆ ಮೀಸಲಿಡುತ್ತಾರೆ.

ಯೂಟ್ಯುಬ್ ಅವರ ಆದಾಯ ಮೂಲ. ಇನ್‌ಸ್ಟಾಗ್ರಾಂನಲ್ಲಿ ಪ್ರಮೋಷನ್‌ಗೆ ಮಾಡುವ ವಿಡಿಯೊಗಳು ಹೆಚ್ಚು ಆದಾಯ ಕೊಡುತ್ತವೆ ಎನ್ನುವ ಅವರು, ಸ್ಥಿರತೆ ಮುಖ್ಯ ಎನ್ನುತ್ತಾರೆ. ಈಗ ರೀಲ್ಸ್ ನೋಡುವವರಿಗಿಂತ ಮಾಡುವವರ ಸಂಖ್ಯೆಯೇ ಹೆಚ್ಚಾದ ಕಾರಣ ನಮ್ಮ ರೀಲ್ಸ್ ಹೆಚ್ಚು ಜನರನ್ನು ತಲುಪಬೇಕೆಂದರೆ ಅದಕ್ಕೆ ಹೆಚ್ಚಿನ ಕ್ರೀಯಾಶೀಲತೆ ಮತ್ತು ವಿಭಿನ್ನ ಕಂಟೆಂಟ್ ನೀಡುವುದು ಅತ್ಯಗತ್ಯ. ಇದು ಹೆಚ್ಚು ಶ್ರಮ ಅಪೇಕ್ಷಿಸುತ್ತದೆ ಎನ್ನುವುದು ಅವರ ಅನುಭವದ ಮಾತು.

'ದೋಸ್ತನ ತಂಗಿ ನನ್ನ ಲವರ್' ಎಂಬ ಕಿರುಚಿತ್ರದ ತುಣುಕುಗಳು ಕನ್ನಡಿಗರ ಮೆಚ್ಚುಗೆಗೆ ಪಾತ್ರವಾಗಿದ್ದಲ್ಲದೇ, ತಮಿಳು, ತೆಲುಗು, ಬಂಗಾಲಿ, ತುಳು ಸೇರಿದಂತೆ ವಿವಿಧ ಭಾಷೆಗಳಿಗೆ ಡಬ್ಬಾಗಿದ್ದು ತುಂಬಾ ಖುಷಿಯ ವಿಷಯ ಎಂದು ನೆನೆಯುತ್ತಾರೆ. 'ಹಬ್ಬಕ್ಕೊಂದು ಗಬ್ಬದ ಕುರಿ' ಎಂಬ ಕಿರುಚಿತ್ರವನ್ನು ತುಳು ಟಾಕೀಜ್ ಆ್ಯಪ್‌ನವರು ಅನುಮತಿ ಮೇರೆಗೆ ರಿಮೇಕ್ ಮಾಡಿದ್ದನ್ನೂ ಸ್ಮರಿಸಿದರು.

'ನಿಂದಕರು ಇರಬೇಕಯ್ಯ ಜಗದೊಳು' ಎನ್ನುವ ದಾಸವಾಣಿಯನ್ನು ನಂಬಿದ ಮಲ್ಯಾ ಅವರು, ನೆಗೆಟಿವ್ ಕಮೆಂಟ್ ಅನ್ನು ತಮ್ಮ ತಪ್ಪುಗಳನ್ನು ಸರಿಪಡಿಸಿ, ಮುಂದೆ ಸಾಗಲು ಇರುವ ಮೆಟ್ಟಿಲೆಂದು ಭಾವಿಸುತ್ತಾರೆ. ತಮ್ಮ ಬದುಕಿಗೆ ಕನೆಕ್ಟ್ ಆಗುವ ಪಾತ್ರಗಳನ್ನು ಜನ ಮೆಚ್ಚುತ್ತಾರೆ. ಹಾಗೇ ತಮ್ಮ ಒತ್ತಡವನ್ನು ತಂದು ಕಮೆಂಟ್ ಬಾಕ್ಸಿನಲ್ಲಿ ತೀರಿಸಿಕೊಳ್ಳುವವರೂ ಇದ್ದಾರೆ. ಎಲ್ಲವನ್ನೂ ಸಮವಾಗಿ ಸ್ವೀಕರಿಸಿ ಮುನ್ನಡೆಯಬೇಕು ಎನ್ನುವುದು ಅವರು ಕಲಿತ ಪಾಠ.

ಇವರ ನಟನೆ, ಜನಪ್ರಿಯತೆಯನ್ನು ನೋಡಿ, ಝೀ ಕನ್ನಡ 'ನಾವು ನಮ್ಮವರು' ಎಂಬ ರಿಯಾಲಿಟಿ ಶೋ ಒಂದರಲ್ಲಿ ಇವರಿಗೆ ಅವಕಾಶ ನೀಡಿದೆ. ಈ ಮೂಲಕ ಮಲ್ಯಾ ಅವರ ಪತ್ನಿ, ಕುಟುಂಬವೂ ಕರ್ನಾಟಕಕ್ಕೆ ಪರಿಚಯವಾಗಿದೆ. ■